# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 207 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 06.03.2025 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಜಿಲ್ಲೆಗಳಲ್ಲಿ ಕೋಮು ಸೌಹಾರ್ದತೆ ಕಾಪಾಡಲು ಪೊಲೀಸ್ ಇಲಾಖೆಯಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಲಾಗಿದೆ. | ದಕ್ಷಿಣ ಕನ್ನಡ ಜಿಲ್ಲೆ ಕರಾವಳಿ ಜಿಲ್ಲೆಗಳಲ್ಲಿ ಕೋಮು ಸೌಹಾರ್ದತೆ ಕಾಪಾಡಲು ಪೊಲೀಸ್ ಇಲಾಖೆಯಿಂದ ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ:<br>➢ ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲಾ ಮಿಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.<br>➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದ್ದು, ಉದ್ರೇಕಕಾರಿ ಪೋಸ್ಟ್ ಹಾಕುವವರ ಮೇಲೆ ಪ್ರಕರಣ ದಾಖಲಿಸಲಾಗುತ್ತದೆ..<br>➢ ಸೂಕ್ಷ್ಮ ಪ್ರದೇಶ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಇಲಾಖೆ ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಸಿ.ಸಿ ಕ್ಯಾಮರ್‌ಗಳನ್ನು ಅಳವಡಿಸಿ ನಿಗಾ ವಹಿಸಲಾಗಿದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಶುಭೋದಯ (ಗುಡ್ ಮಾರ್ನಿಂಗ್) ಬೀಟ್‌ಗಳನ್ನು ಕೈಗೊಳ್ಳಲಾಗಿದೆ. ಏಕಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.<br>➢ ಅಂತರ್ ರಾಜ್ಯ ಸಂಪರ್ಕಿಸುವ ಗಡಿಯಲ್ಲಿ ಚೆಕ್ ಪೋಸ್ಟ್‌ಗಳನ್ನು ತೆರೆದು, ಎಲ್ಲಾ ವಾಹನ, ಸಂಶಯಿತ ವ್ಯಕ್ತಿಗಳನ್ನು ತಪಾಸಣೆ ನಡೆಸಲಾಗುತ್ತಿದೆ.<br>➢ ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳ ಬಗ್ಗೆ ಠಾಣಾ ಗುಪ್ತವಾರ್ತಾ ಸಿಬ್ಬಂದಿಯವರಿಗೆ ಮತ್ತು ಬೀಟ್ ಸಿಬ್ಬಂದಿಯವರ ಮೂಲಕ ಸೂಕ್ತ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.<br>➢ ಸುಧಾರಿತ ಗಸ್ತು ಪದ್ಧತಿಯನ್ನು ಜಾರಿಗೊಳಿಸಿ ಕ್ರಮ ತೆಗೆದುಕೊಳ್ಳಲಾಗಿದೆ.<br>➢ ಹಗಲು ಮತ್ತು ರಾತ್ರಿ ಗ್ರಾಮ ಗಸ್ತು ಕರ್ತವ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲಾಗುತ್ತಿದೆ. ತುರ್ತು ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳಲು ಮತ್ತು ಘಟನಾ ಸ್ಥಳಕ್ಕೆ ಶೀಘ್ರವಾಗಿ ತಲುಪಲು 24x7 ಇ.ಆರ್.ಎಸ್.ಎಸ್ ವ್ಯವಸ್ಥೆ ಜಾರಿಯಲ್ಲಿರುತ್ತದೆ.<br>➢ ಕೋಮು ಗಲಭೆ ಹಿನ್ನಲೆಯುಳ್ಳ ವ್ಯಕ್ತಿಗಳ ಚಲನ-ವಲನಗಳನ್ನು ಪ್ರತಿನಿತ್ಯ ಗಮನಿಸಲಾಗುತ್ತಿದೆ.<br>➢ ರೌಡಿಗಳು ಮತ್ತು ಮತೀಯ ಗೂಂಡಾಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಅವರ ಚಟುವಟಿಕೆಯ ಮೇಲೆ ಸೂಕ್ತ ನಿಗಾ ಇರಿಸಲಾಗಿದೆ.<br>➢ ಠಾಣಾ ವ್ಯಾಪ್ತಿಯಲ್ಲಿ ಸಕ್ರಿಯವಾಗಿರುವ ರೌಡಿ ಆಸಾಮಿಗಳ ಮತ್ತು ಮತೀಯ ಗೂಂಡಾಗಳ ಚಲನ-ವಲನಗಳನ್ನು ಹಾಗೂ ಅವರ |

<table>
<tr>
<td></td>
<td></td>
<td>
ಚಟುವಟಿಕೆಯ ಕುರಿತು ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಕಲಂ 126, 129 ಬಿ.ಎನ್.ಎಸ್ ಪ್ರಕಾರ ಪ್ರಕರಣ ದಾಖಲಿಸಿ ಬಾಂಡ್ ಮುಚ್ಚಳಿಕೆ ಪಡೆಯುವಂತೆ ನೋಡಿಕೊಳ್ಳಲಾಗುತ್ತಿದೆ.<br>
➢ ದೈಹಿಕ ಹಲ್ಲೆ ನಡೆಸಿದ, ತನಿಖೆ ಅಥವಾ ನ್ಯಾಯಾಲಯದ ವಿಚಾರಣೆಯಲ್ಲಿರುವ ಪ್ರಕರಣಗಳಲ್ಲಿ ಭಾಗಿಯಾದ ರೌಡಿ ಆಸಾಮಿಗಳು ಮತ್ತು ಮತೀಯ ಗೂಂಡಾಗಳು, ಪುನ: ದೈಹಿಕ ಹಲ್ಲೆ ಪ್ರಕರಣದಲ್ಲಿ ಭಾಗಿಯಾದರೆ ಸದರಿ ಆರೋಪಿಗಳು ಈಗಾಗಲೇ ನ್ಯಾಯಾಲಯದಿಂದ ಪಡೆದಿರುವ ಜಾಮೀನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಹಾಗೂ ಕರ್ನಾಟಕ ಪೋಲೀಸ್ ಕಾಯ್ದೆ ಅನ್ವಯ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>
➢ ರೌಡಿ ಆಸಾಮಿಗಳು ಮತ್ತು ಮತೀಯ ಗೂಂಡಾಗಳು ಅಪರಾಧಿಕ ಪ್ರಕರಣಗಳಲ್ಲಿ ಭಾಗಿಯಾಗಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಮುಂದುವರಿದಿದ್ದಲ್ಲಿ ಅವರನ್ನು ನಿಯಂತ್ರಣದಲ್ಲಿಡಲು ಗೂಂಡಾ ಕಾಯ್ದೆಯಂತೆ ಕ್ರಮ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ.
</td>
</tr>
<tr>
<td>ಆ</td>
<td>ಕೋಮು ಸೌಹಾರ್ದತೆಗೆ ಧಕ್ಕೆ ತರುವ ವ್ಯಕ್ತಿಗಳ ಮೇಲೆ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಕರಾವಳ ಭಾಗದ 03 ಜಿಲ್ಲೆಗಳಲ್ಲಿ ಎಷ್ಟು ಪ್ರಕರಣ ದಾಖಲು ಮಾಡಲಾಗಿದೆ: (ವಿವರ ನೀಡುವುದು)</td>
<td>
ಕೋಮು ಸೌಹಾರ್ದತೆಗೆ ಧಕ್ಕೆ ತರುವ ವ್ಯಕ್ತಿಗಳ ಮೇಲೆ ಕಳೆದ 03 ವರ್ಷಗಳಲ್ಲಿ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಕರಾವಳ ಭಾಗದಲ್ಲಿ ದಾಖಲಾದ ಪ್ರಕರಣಗಳ ವರ್ಷವಾರು ಮಾಹಿತಿ ಕೆಳಗಿನಂತಿದೆ.
<table>
<tr><th rowspan="2">ಕ್ರಸ</th><th rowspan="2">ಘಟಕ</th><th colspan="3">ವರ್ಷ</th></tr>
<tr><th>2023</th><th>2024</th><th>2025</th></tr>
<tr><td>1</td><td>ದಕ್ಷಿಣ ಕನ್ನಡ</td><td>0</td><td>0</td><td>0</td></tr>
<tr><td>2</td><td>ಉತ್ತರ ಕನ್ನಡ</td><td>1</td><td>6</td><td>0</td></tr>
<tr><td>3</td><td>ಉಡುಪಿ</td><td>9</td><td>5</td><td>3</td></tr>
<tr><td></td><td>ಒಟ್ಟು</td><td>10</td><td>11</td><td>3</td></tr>
</table>
ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-ಅ ದಲ್ಲಿ ಒದಗಿಸಲಾಗಿದೆ.
</td>
</tr>
<tr>
<td>ಇ</td>
<td>ಕೋಮು ಸೌಹಾರ್ದತೆಗೆ ಧಕ್ಕೆ ಉಂಟು ಮಾಡುವ ಭಾಷಣಗಳನ್ನು ಮಾಡುವ ವ್ಯಕ್ತಿಗಳ ವಿರುದ್ಧ ಎಷ್ಟು ಕೇಸು ದಾಖಲಿಸಲಾಗಿದೆ ಮತ್ತು ಅವರ ವಿರುದ್ಧ ಕ್ರಮ ಕೈಗೊಳ್ಳಲಾಗಿದೆಯೇ? (ವಿವರ ನೀಡುವುದು)</td>
<td>
ಕೋಮು ಸೌಹಾರ್ದತೆಗೆ ಧಕ್ಕೆಯುಂಟು ಮಾಡುವ ಭಾಷಣಗಳನ್ನು ಮಾಡಿದ ವ್ಯಕ್ತಿಗಳ ವಿರುದ್ಧ ಹಾಗೂ ಅವರ ವಿರುದ್ಧ ದಾಖಲಾದ ಪ್ರಕರಣಗಳ ವರ್ಷವಾರು ಮಾಹಿತಿ ಕೆಳಗಿನಂತಿದೆ;
<table>
<tr><th rowspan="2">ಕ್ರಸ</th><th rowspan="2">ಘಟಕ</th><th colspan="3">ವರ್ಷ</th></tr>
<tr><th>2023</th><th>2024</th><th>2025</th></tr>
<tr><td>1</td><td>ದಕ್ಷಿಣ ಕನ್ನಡ</td><td>1</td><td>0</td><td>0</td></tr>
<tr><td>2</td><td>ಉತ್ತರ ಕನ್ನಡ</td><td>5</td><td>4</td><td>0</td></tr>
<tr><td>3</td><td>ಉಡುಪಿ</td><td>5</td><td>0</td><td>1</td></tr>
<tr><td></td><td>ಒಟ್ಟು</td><td>11</td><td>4</td><td>1</td></tr>
</table>
</td>
</tr>
</table>

ಹೆಚ್‌ಡಿ 90 ಪಿಸಿಇ 2025

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು

# ಅನುಬಂಧ

**ಕೋಮು ಸೌಹಾರ್ದತೆಗೆ ಧಕ್ಕೆ ತರುವ ವ್ಯಕ್ತಿಗಳ ಮೇಲೆ ದಾಖಲಾದ ಪೊಲೀಸ್ ಠಾಣಾ ವಿವರ**

**ಉಡುಪಿ ಜಿಲ್ಲೆ:**

| ಕ್ರಸಂ | ಪೊಲೀಸ್ ಠಾಣೆ | ಮೊ.ಸಂ. ಮತ್ತು ಕಲಂ |
|---|---|---|
| 1. | ಕಾರ್ಕಳ ನಗರ | 153/2023 ಕಲಂ 143, 341, 323, 505(1)(B) & 149 ಐಪಿಸಿ |
| 2. | ಶಿರ್ವ ಠಾಣೆ | 56/2023 ಕಲಂ: 153 ಎ, 505(2) ಐಪಿಸಿ |
| 3. | ಶಿರ್ವ ಠಾಣೆ | 73/2023, ಕಲಂ: 504, 505 (2), 506 ಐಪಿಸಿ. |
| 4. | ಉಡುಪಿ ನಗರ | 150/2023 ಕಲಂ: 153 (ಎ), 505(2) ಜೊತೆಗೆ 34 ಐಪಿಸಿ |
| 5. | ಉಡುಪಿ ನಗರ | 174/2023 ಕಲಂ: 115. 505(2) ಐಪಿಸಿ |
| 6. | ಉಡುಪಿ ನಗರ | ಅಕ್ರ ನಂ: 14/2024 ಕಲಂ: 294, 504, 505(2) ಐಪಿಸಿ |
| 7. | ಉಡುಪಿ ನಗರ | 82/2024 ಕಲಂ: |
| 8. | ಉಡುಪಿ ನಗರ | 132/2024 ಕಲಂ: 193, 353 ಬಿ.ಎನ್.ಎಸ್. |
| 9. | ಮಲ್ಪೆ | 76/2023 ಕಲಂ 153(ಎ), 505(2) ಐಪಿಸಿ |
| 10. | ಮಲ್ಪೆ | 88/2023 505(2), 34 ಐಪಿಸಿ |
| 11. | ಮಲ್ಪೆ | 102/2023 ಕಲಂ 143, 147, 149, 447, 448, 505(2) ಐಪಿಸಿ |
| 12. | ಮಲ್ಪೆ | 102/2023 ಕಲಂ 205(ಎ) 505(2) ಐಪಿಸಿ |
| 13. | ಮಲ್ಪೆ | 35/2024 ಕಲಂ 505(2) ಐಪಿಸಿ |
| 14. | ಮಲ್ಪೆ | 42/2024 ಕಲಂ 505(2) ಐಪಿಸಿ |
| 15. | ಶಿರ್ವ ಠಾಣೆ | 12/2025 ಕಲಂ 299, 353(2) ಬಿಎನ್ಎಸ್ |
| 16. | ಉಡುಪಿ ನಗರ | 04/2025 ಕಲಂ: 353(2) R/W 3(5) ಬಿ.ಎನ್.ಎಸ್. |
| 17. | ಕೋಟ | 19/2025 ಕಲಂ:353(2) ಬಿ.ಎನ್.ಎಸ್ |

**ಉತ್ತರ ಕನ್ನಡ ಜಿಲ್ಲೆ:**

| ಕ್ರಸಂ | ಪೊಲೀಸ್ ಠಾಣೆ | ಮೊ.ಸಂ. ಮತ್ತು ಕಲಂ |
|---|---|---|
| 1 | ಯಲ್ಲಾಪುರ | 165/2023 Prevention of Insult to National Honours Act 1971 (U/s 2(F) |
| 2 | ಭಟ್ಕಳ ಗ್ರಾಮೀಣ | 32/2024 ಕಲಂ 143, 447, 153(ಎ) 149 ಐಪಿಸಿ ಮತ್ತು ಕಲಂ: 3,4,5 ಕರ್ನಾಟಕ ತೆರೆದ ಸ್ಥಳಗಳ (ವಿಕಾರ ತಡೆಗಟ್ಟುವಿಕೆ) ಕಾಯ್ದೆ-1981. |
| 3 | ಅಂಕೋಲಾ | 12/2024 ಕಲಂ.153(ಎ), 295(ಎ), 505(2) ಐಪಿಸಿ |
| 4 | ಅಂಕೋಲಾ | 13/2024 ಕಲಂ. 153(ಎ), 295(ಎ), 505(2) ಐಪಿಸಿ |
| 5 | ಚಿತ್ತಾಕುಲಾ | 05/2024 ಕಲಂ : 153(ಎ), 505(2) ಐ.ಪಿ.ಸಿ |
| 6 | ಹಳಿಯಾಳ | 20/2024 ಕಲಂ : 153(ಎ),505 (2) ಐಪಿಸಿ |
| 7 | ಯಲ್ಲಾಪುರ | 279/2024 The Bharatiya Nyaya Sanhita 2023 (U/s-292,118(1)) |

****